(v) ಬ್ರಹ್ಮಾವರ ಕ್ಷೇತ್ರದ ಹಾವಂಜೆ ಗ್ರಾಮದಲ್ಲಿರುವ ಶ್ರೀ ಲಚ್ಚನಾಯ್ಕನ ಮನೆಯಲ್ಲಿ ದರೋಡೆ.

ಮಾನ್ಯ ಅಧ್ಯಕ್ಷರೇ, ಮಾನ್ಯ ಬಸವರಾಜ್ ಅವರು ನಿಯಮ ೩೩ರ ಪ್ರಕಾರ ಕೊಟ್ಟಿರುವ ಸೂಚನೆಗೆ ನಾನು ಈ ಹೇಳಿಕೆಯನ್ನು ಕೊಡಬಯಸುತ್ತೇನೆ.

ದಿನಾಂಕ ೨೬-೧-೧೯೮೬ರ ಮಧ್ಯ ರಾತ್ರಿ ಕೆಲವು ಅಪರಿಚಿತ ದುಷ್ಕರ್ಮಿಗಳು ಹಾವಂಜೆ ಗ್ರಾಮದ ನೀರಪಾಲ್ಕೆಯ ಲಚ್ಚನಾಯ್ಕನ ಮನೆಗೆ ನುಗ್ಗಿ, ಲಚ್ಚನಾಯ್ಕ, ಆತನ ಪತ್ನಿ ಪಡ್ಡಿಬಾಯಿ ಹಾಗೂ ಮಂಕ್ಕಳಾದ ಗಿರಿಜಾ, ಸುಮಿತ್ರ, ಪ್ರೇಮ, ಜಯಾನಂದ ಮೊಮ್ಮಗನಾದ ರಾಘವೇಂದ್ರ ಇವರುಗಳನ್ನು ಗುದ್ದಲಿಯ ಹಿಂಭಾಗದಿಂದ ಹೊಡೆದು ಗಾಯಗಳನ್ನುಂಟು ಮಾಡಿ ಸುಮಾರು ೭೦೦ ರೂಪಾಯಿಗಳಷ್ಟು ಬೆಲೆ ಬಾಳುವ ಕಿವಿ ಓಲೆ, ಮೂಗು ಬೊಟ್ಟು ಮತ್ತು ಕರಿಮಣಿ ಸರಗಳನ್ನು ದೋಚಿಕೊಂಡು ಹೋಗಿರುವರು. ಸುದ್ದಿ ತಿಳಿದ ಮೇಲೆ ಪೋಲೀಸರು ಸ್ಥಳಕ್ಕೆ ಧಾವಿಸಿ ಗಾಯಗೊಂಡವರನ್ನು ತಕ್ಷಣ ಉಡುಪಿ ಆಸ್ಪತ್ರೆಗೆ ಸಾಗಿಸಿದರು. ಆಸ್ಪತ್ರೆಗೆ ಹೋಗುವ ದಾರಿಯಲ್ಲಿ ಗಾಯಗೊಂಡಿದ್ದ ರಾಘವೇಂದ್ರ ಎಂಬ ೫ ವರ್ಷದ ಬಾಲಕನು ಮೃತಪಟ್ಟನು. ಈ ಪ್ರಕರಣದ ಬಗ್ಗೆ ಬ್ರಹ್ಮಾವರ ಪೋಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ. ೪:೮೬ ಕಲಂ ೪೫೭-೫೯೪-೫೦೭-೫೦೨ ಭಾರತೀಯ ದಂಡ ಸಂಹಿತೆಯ ಪ್ರಕಾರ ಗುನ್ನೆಯೊಂದನ್ನು ನೊಂದಾಯಿಸಿ ಕುಂದಾಪುರದ ವೃತ್ತ ಆರಕ್ಷಕ ನಿರೀಕ್ಷಕರವರು ತನಿಖೆ ಕೈಗೊಂಡರು. ಪಶ್ಚಿಮ ವಲಯದ ಆರಕ್ಷಕ ಮಹಾ ನಿರೀಕ್ಷಕರು ಮತ್ತು ಜಿಲ್ಲಾ ಆರಕ್ಷಕ ಅಧೀಕ್ಷಕರು ಸ್ಥಳಕ್ಕೆ ಧಾವಿಸಿ ತನಿಖೆಯ ಉಸ್ತುವಾರಿ ನೋಡಿಕೊಂಡು ತನಿಖೆಯ ಅಧಿಕಾರಿಗೆ ಸೂಕ್ತ ಸಲಹೆಗಳನ್ನು ನೀಡಿರುವರು. ಗಾಯಗೊಂಡ ಮಹಿಳೆಯರನ್ನು ಉನ್ನತ ಚಿಕಿತ್ಸೆಗಾಗಿ ಮಣಿಪಾಲಿನಲ್ಲಿರುವ ಕೆಎಂಸಿ ಆಸ್ಪತ್ರೆಗೆ ಸಾಗಿಸಲಾಯಿತು. ಅಲ್ಲಿ ಅವರಿಗೆ ಚಿಕಿತ್ಸೆಯನ್ನು ಉಚಿತವಾಗಿ ನೀಡುತ್ತಿದ್ದಾರೆ. ಅಲ್ಲಿ ಅವರು ಚೇತರಿಸಿಕೊಳ್ಳುತ್ತಿದ್ದಾರೆ.

ಈಗ ಜಿಲ್ಲೆಯಾದ್ಯಂತ ಹಾಗೂ ಸದರೀ ಪ್ರದೇಶದಲ್ಲಿ ಗಸ್ತನ್ನು ತೀವ್ರಗೊಳಿಸಲಾಗಿದೆ. ಗ್ರಾಮ ರಕ್ಷಣಾ ದಳದ ಸದಸ್ಯರನ್ನು ಕೂಡ ಗಸ್ತು ತೀವ್ರ ಗೊಳಿಸುವುದಕ್ಕೆ ಉಪಯೋಗಿಸಲಾಗಿದೆ. ರಾತ್ರಿ ವೇಳೆ ಗಸ್ತು ತಿರುಗುವುದನ್ನು ಪರೀಕ್ಷೆ ಮಾಡಲು ಜಿಲ್ಲೆಯಾದ್ಯಂತ ಏರ್ಪಾಡು ಮಾಡಿ ಅಪರಾಧಗಳನ್ನು ತಡೆಯುವುದಕ್ಕೆ ಕ್ರಮ ತೆಗೆದುಕೊಳ್ಳಲಾಗಿದೆ. ಅಪರಾಧಿಗಳನ್ನು ಪತ್ತೆ ಹಚ್ಚಲು ಸತತ ಪ್ರಯತ್ನಗಳು ನಡೆಯುತ್ತಿವೆ. ದಿನಾಂಕ ೨೮-೧-೧೯೮೬ ರಂದು ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರು ದಕ್ಷಿಣ ಕನ್ನಡ ಜಿಲ್ಲೆಗೆ ಭೇಟಿ ಇತ್ತು ಸೂಕ್ತ ಸೂಚನೆಗಳನ್ನು ಕೆಳಗಿನ ಅಧಿಕಾರಿಗಳಿಗೆ ಕೊಟ್ಟಿರುತ್ತಾರೆ.

ಈ ಘಟನೆಯಲ್ಲಿ ನೊಂದವರೆಲ್ಲರೂ ಪರಿಶಿಷ್ಟ ವರ್ಗಕ್ಕೆ ಸೇರಿದವರಾದ ಕಾರಣ ಸರಕಾರದ ಆದೇಶದ ಕ್ರಮಾಂಕ ಎಸ್‌ಡಬ್ಲ್ಯೂಎಲ್ ೧ ಎಸ್‌ಎಸ್‌ಸಿ ೮೬ ದಿನಾಂಕ ೨೧-೪-೧೯೫೫ರಲ್ಲಿ ನಮೂದಿಸಿರುವಂತೆ ಪರಿಹಾರ ಧನ ನೀಡಲು ಜಿಲ್ಲಾಧಿಕಾರಿಯವರಿಗೆ ವರದಿಯನ್ನು ಜಿಲ್ಲಾ ಆರಕ್ಷಕ ಅಧೀಕ್ಷಕರು ಕಳುಹಿಸಿರುತ್ತಾರೆ.

ಅದೂ ಅಲ್ಲದೆ, ಅಲ್ಲಿ ನೊಂದಿರತಕ್ಕ ಜನರಿಗೆ ಅಲ್ಲಿನ ಜಿಲ್ಲಾ ಜನತಾ ಪಕ್ಷದ ಅಧ್ಯಕ್ಷರು ಕೊಟ್ಟ ೧ ಸಾವಿರ ರೂಪಾಯಿಗಳನ್ನುನನ್ನ ಕೈಯಿಂದಲೇ ಕೊಡಿಸಿದ್ದಾರೆ. ಅಲ್ಲವೇ ಅಲ್ಲಿನ ಲಯನ್ಸ್ ಕ್ಲಬ್‌ನ ಅಧ್ಯಕ್ಷರು ಕೂಡಾ ಗಾಯಾಳುಗಳಿಗೆ ಒಂದೊಂದು ಸಾವಿರ ರೂಪಾಯಿಗಳನ್ನು ಕೊಡಿಸಿದ್ದಾರೆ.

(vi) ತೀರ್ಥಹಳ್ಳಿ ಪೋಲಿಸರು ಶ್ರೀ ಉಮೇಶ ಶಣೈಯವರನ್ನು ಬಂಧಿಸಿರುವ ಬಗ್ಗೆ.

ಮಾನ್ಯ ಅಧ್ಯಕ್ಷರೇ, ಮಾನ್ಯ ಬಿ. ಎಸ್. ಯಡಿಯೂರಪ್ಪ ಅವರು ನಿಯಮ ೩೩ರ ಪ್ರಕಾರ ಕೊಟ್ಟಿರುವ ಸೂಚನೆಗೆ ನಾನು ಈ ಹೇಳಿಕೆಯನ್ನು ಕೊಡಬಯಸುತ್ತೇನೆ.

ದಿನಾಂಕ ೨೪-೧-೮೬ ರಂದು ಸುಮಾರು ೮ ಗಂಟೆ ಸಮಯದಲ್ಲಿ ಬಂಕ್ಕಲಪುರ ಗ್ರಾಮದ ನಾರಾಯಣ ಶೆರಿಗಾರ್‌ರವರ ಮಗ ಕೆ. ಎನ್. ಕೃಷ್ಣ ಎಂಬುವರು ತೀರ್ಥಹಳ್ಳಿ ಪೋಲೀಸ್ ಠಾಣೆಗೆ ಹೋಗಿ ಬಾಯಿ ಮಾತಿನಲ್ಲಿ ಈ ಕೆಳಕಂಡಂತೆ ಹೇಳಿರುತ್ತಾರೆ. ಸದರಿಯವರು ಅವರ ಮನೆಯಲ್ಲಿ